Rotary

# JASMINE

ಜಾಸ್ಮಿನ್

जास्मिन

WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary

Volume 39 | Issue - 25 | 12th December 2024

## SPECIAL BULLETIN

on the eve of official visit of

Dist. Governor

## Rtn. CA Dev Anand

R.I.Dist. 3182

Time : 7.00 p.m.
Venue : PCP Auditorium, Philomena Commercial Park, Basrur Murkai.



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

39th year of Service and Fellowship

## ಸಂಪಾದಕೀಯ :



ಆತ್ಮೀಯ ರೋಟರಿ ಮಿತ್ರರೇ,

ನನ್ನ ಮತ್ತು ರೋಟರಿಯ ಒಡನಾಟ ಕೆಲವೇ ವರ್ಷಗಳದ್ದು. ಆ ಸಣ್ಣ ಸಮಯದಲ್ಲಿ ನನಗೆ ಈ ವರ್ಷ JASMINE ಸಂಪಾದಕತ್ವದ ಜವಾಬ್ದಾರಿ ನೀಡಿರುವ ರೋಟರಿ ಅಧ್ಯಕ್ಷರಿಗೆ ನನ್ನ ನಮನಗಳು. JASMINE ನ ಘನತೆಗೆ ಯಾವುದೇ ಕೊರತೆಯಾಗದಂತೆ ಅದನ್ನು ಮುಂದುವರಿಸುವ ಜವಾಬ್ದಾರಿ ನನ್ನದಾಗಿತ್ತು. "ವ್ಯಯೇ ಕೃತೇ ವರ್ಧತೆ ಏವ ನಿತ್ಯಂ ವಿದ್ಯಾಧನಂ ಸರ್ವಧನ ಪ್ರಧಾನಂ" ಎಂಬಂತೆ ಅಧ್ಯಕ್ಷರು ಹಾಗೂ ನನ್ನ ಹಿರಿಯ ರೋಟರಿ ಮಿತ್ರರ ಸಹಾಯ, ಅವರ ಅನುಭವ ಹಾಗೂ ಮಾರ್ಗದರ್ಶನದಿಂದ ಜಾಸ್ಮಿನ್ ಪತ್ರಿಕೆಯನ್ನು ಉತ್ತಮವಾಗಿ ಪ್ರತಿವಾರವೂ ಹೊರ ತರಲು ಸಾಧ್ಯವಾಗುತ್ತಿದೆ. ಅವರೆಲ್ಲರಿಗೂ ನಾನು ಚಿರಋಣಿಯಾಗಿದ್ದೇನೆ.

ಇಂದು ರೋಟರಿ ಜಿಲ್ಲಾ ಗವರ್ನರ್ ಭೇಟಿಯ ದಿನ. ನಮ್ಮ ಕ್ಲಬ್ಬಿನ ಅರ್ಧ ವಾರ್ಷಿಕ ಮೌಲ್ಯಮಾಪನವೂ ಹೌದು. ಈ ವರ್ಷ ನಮ್ಮ ಅಧ್ಯಕ್ಷರ ರೋಟರಿ ಸೇವೆಯು ನಿಜವಾಗಿಯೂ ಅತ್ಯುತ್ತಮ. ಈ ವರ್ಷದ ಧ್ಯೇಯ ವಾಕ್ಯ The Magic of Rotary. ಈ ವಾಕ್ಯಕ್ಕೆ ಅನ್ವರ್ಥದಂತೆ ಈ ಅರ್ಧ ವಾರ್ಷಿಕ ಅವಧಿಯಲ್ಲಿ ನಮ್ಮ ಕ್ಲಬ್ಬಿನಿಂದ ಅದ್ಭುತವಾದ ಕಾರ್ಯಗಳು ನಡೆದಿವೆ ಎಂದರೆ ತಪ್ಪಲ್ಲ. ಇನ್ನುಳಿದ ಅವಧಿಯಲ್ಲಿ ನಮ್ಮ ಅಧ್ಯಕ್ಷರು ಇನ್ನೂ ಉತ್ತಮ ಕಾರ್ಯಗಳನ್ನು ಮಾಡುತ್ತಾರೆ ಎನ್ನುವ ಭರವಸೆ ನಮ್ಮೆಲ್ಲರಿಗಿದೆ. ಇದಕ್ಕಾಗಿ ನಾವೆಲ್ಲರೂ ಒಟ್ಟಾಗಿ ಕೈಜೋಡಿಸಿ, ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣವನ್ನು ಇನ್ನೂ ಉನ್ನತ ಸ್ಥಾನಕ್ಕೇರಿಸೋಣ. **ರೊ. ಡಾ. ಅನುಲೇಖ ಬಾಯರಿ.**

---

## ಅಧ್ಯಕ್ಷರ ಮಾತು :



ಮಿತ್ರರೇ,

2024–25 **The Magic of Rotary** ವರ್ಷದ ಅರ್ಧದಷ್ಟು ದಾರಿಯನ್ನು ಕ್ರಮಿಸಿದ್ದೇವೆ. ಪ್ರತಿಷ್ಠಿತ ಕ್ಲಬ್ಬಿನ ಅಧ್ಯಕ್ಷರಾಗಿ ಜವಾಬ್ದಾರಿ ವಹಿಸಿಕೊಳ್ಳುವ ಮೊದಲೇ ಸಾಕಷ್ಟು ಪೂರ್ವ ತಯಾರಿ ಮತ್ತು ಸಿದ್ಧತೆಗಳನ್ನು ಮಾಡಿಕೊಂಡದ್ದು ನನಗೆ ತುಂಬಾ ಅನುಕೂಲವಾಯಿತು.

ಇಲ್ಲಿಯವರೆಗೆ ಎಲ್ಲಾ ತಿಂಗಳುಗಳಲ್ಲಿಯೂ BOD ಗಳನ್ನು, ಎಲ್ಲಾ ತಿಂಗಳುಗಳಲ್ಲಿ ಕುಟುಂಬ ಸಮ್ಮಿಲನಗಳನ್ನು ಮಾಡಲು ಎಲ್ಲಾ ಸದಸ್ಯರು ಸಹಕರಿಸಿದ್ದು, ರೊ. ಶ್ರೀನಾಥ್ ಚಾತ್ರಾರವರು Outdoor Meeting ಮಾಡಿದ್ದು ಮತ್ತು PDG ರೊ. ಸದಾನಂದ ಚಾತ್ರಾರವರು ತಮ್ಮ Estateನಲ್ಲಿ Picnicನ್ನು ಏರ್ಪಡಿಸಿದ್ದು, ರೋಟರಿಯಲ್ಲಿ ಕೌಟುಂಬಿಕ ಬಾಂಧವ್ಯವು ವೃದ್ಧಿಸುವಲ್ಲಿ ಸಹಕಾರಿಯಾಯಿತು. ಸಾಕಷ್ಟು ಸೇವಾ ಕಾರ್ಯಕ್ರಮಗಳು ಮಾಡಿದ್ದು ಆತ್ಮತೃಪ್ತಿಯನ್ನು ನೀಡಿದವು. ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳ 8 ಅಂಗನವಾಡಿಗಳ ಪುಟಾಣಿಗಳಿಗೆ ಪ್ರೋಟೀನ್ ಪೌಡರ್ ವಿತರಣೆ, ರಸ್ತೆ ಸುರಕ್ಷಾ ಜಾಥಾ ಮತ್ತು ಮಾಹಿತಿ ಕಾರ್ಯಕ್ರಮಗಳು, ಮಹಿಳೆಯರಿಗೆ ಕ್ಯಾನ್ಸರ್ ತಪಾಸಣಾ ಶಿಬಿರ ಮೊದಲಾದವು ಹೆಚ್ಚು ತೃಪ್ತಿ ನೀಡಿದ ಕಾರ್ಯಕ್ರಮಗಳು.

ಮುಂದೆ ಕನಸಿನ ಕಾರ್ಯಕ್ರಮಗಳಾದ ನಿರ್ಗತಿಕ ಮಹಿಳೆಗೆ ಮನೆ ನಿರ್ಮಾಣಗೊಳಿಸುವ ಯೋಜನೆ ಪೂರ್ಣಗೊಳಿಸಲು ಮತ್ತು ಇದರ ಪೂರ್ಣ ವೆಚ್ಚ 6 ಲಕ್ಷ ರೂಪಾಯಿಯ ಕೊಡುಗೆ ನೀಡಿದ ನನ್ನ ಕುಟುಂಬದ ಹಿತೈಷಿ ಹಾಗೂ ಉದ್ಯಮಿ ಶ್ರೀ ಪ್ರತಾಪ್ ಮೆಂಡೋನ್ಸಾ ಅವರಿಗೆ ಅಂತರಾಳದ ವಂದನೆಗಳು. ಫೆಬ್ರವರಿಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಂಗಳೂರು ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಉಡುಪಿ ಜಿಲ್ಲೆಯಲ್ಲಿ “ಉದ್ಯೋಗ ಮೇಳ” ಕಾರ್ಯಕ್ರಮವನ್ನು ಆಯೋಜಿಸಿ ಗ್ರಾಮೀಣ ಯುವಶಕ್ತಿಗೆ ಉದ್ಯೋಗ ಕಲ್ಪಿಸುವ ಮಹತ್ತರ ಆಕಾಂಕ್ಷೆಯ ಕಾರ್ಯಕ್ರಮವನ್ನು ನಡೆಸುವ ಉದ್ದೇಶವಿದೆ.

ರೋಟರಿಯಲ್ಲಿ Service Above Self ಎನ್ನುವ ಧ್ಯೇಯ ವಾಕ್ಯದಡಿಯಲ್ಲಿ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಅವಕಾಶ "ಸಮಾಜ ಸೇವೆ" classification ಹೊಂದಿರುವ ನನಗೆ ಸ್ಫೂರ್ತಿಯುತವಾಗಿದೆ. ಅದಕ್ಕಾಗಿ ನಾನು ಎಂದಿಗೂ ರೋಟರಿಗೆ ಚಿರಋಣಿಯಾಗಿದ್ದೇನೆ. – **ರೊ. ಜುಡಿತ್ ಮೆಂಡೋನ್ಸಾ,** ಅಧ್ಯಕ್ಷರು

---

## ROTARY INTERNATIONAL PRESIDENTS MESSAGE



Rotary is at its best when we foster a sense of inclusion and belonging in our clubs. In fact, I would go so far as to say that belonging is The Magic of Rotary itself.

With a focus on inclusivity and belonging, it is easier to be united in a common purpose. When we are committed to one another and focused on our goals, we are most effective.

Rotary's Action Plan can help. The Action Plan comes with tools you can use to collect feedback, assess your club's strengths and weaknesses, and address challenges.

The world is changing, and our clubs can't afford to stand still. But the changes we make need to be consistent and strategic — building on one another toward a greater vision. The Action Plan can help you work toward that vision and create effective change within your club. Following the Action Plan and addressing suggestions from the community will go a long way to fostering the sense of belonging we want all Rotary members to feel in their clubs.

That's why expanding our commitment to diversity, equity, and inclusion is so important. Committing ourselves to each other's well-being is the first step to expanding our reach, allowing us to spread Positive Peace in these troubled times.

Peacebuilding is one of our top priorities, and one of the most effective ways we can build peace is with our Rotary Peace Fellowships, through which peace and development professionals learn how to prevent and end conflict.

We offer the fellowships through our Rotary Peace Centers at leading universities around the globe, where more than 1,800 Rotary Peace Fellows have graduated. And thanks to a $15.5 million gift from the Otto and Fran Walter Foundation, we can continue supporting peacebuilders in more regions with the next peace center at BahçeOpening another peace center is a monumental achievement, and it is my great honor to invite you to celebrate at next year's Rotary Presidential Peace Conference at the Istanbul center. The three-day conference 20-22 February will highlight the many ways our family of Rotary advances peacebuilding. Registration for the conference is officially open. I hope to see you there.


The 2025 Rotary Presidential Peace Conference has great potential for our peacebuilding efforts — but only if we have your support.

The truth is, we're not going to bring peace to the world, end polio, or grow membership by waving a wand and saying some funny words. It's up to you. You create the magic with every project completed, every dollar donated, and every new member inducted.

I love my Rotary family and I know you do too. That's why I know that together, we can make every club and district simply irresistible. This year, let us change the world by embracing The Magic of Rotary.

**Stephanie A. Urchick President,**
Rotary International 2024-25

---



### ಜಿಲ್ಲಾ ಗವರ್ನರ್2024–25 ರೊ. CA ದೇವ್ ಆನಂದ್ ರವರ ಸಂದೇಶ

ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಮಿತ್ರರೇ,

ತಮ್ಮ ಕ್ಲಬ್ಬಿಗೆ ಅಧಿಕೃತ ಭೇಟಿ ನೀಡುವ ಈ ಸಂದರ್ಭದಲ್ಲಿ ತಮ್ಮ ಸಂಸ್ಥೆಯ ಬಗ್ಗೆ ತಿಳಿದುಕೊಂಡಿರುವ ಮತ್ತು ಸಂಸ್ಥೆಯ ಹಲವರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿರುವ ನಾನು ನಿಮ್ಮ ಕ್ಲಬ್ಬಿನ ಬಗ್ಗೆ ಅಪಾರ ಗೌರವ ಮತ್ತು ಪ್ರೀತಿಯನ್ನು ಹೊಂದಿರುತ್ತೇನೆ.

ಇಬ್ಬರು PDGಗಳನ್ನು ಹೊಂದಿರುವ ಸಂಸ್ಥೆ, TRF ದೇಣಿಗೆಯಲ್ಲಿ ಜಿಲ್ಲೆಯಲ್ಲೇ ಗುರುತಿಸಿಕೊಂಡಿರುವ ತಮ್ಮ ಕ್ಲಬ್ ಹೆಚ್ಚಿನ ಕಾರ್ಯಕ್ರಮಗಳಿಂದ ಸಮಾಜಕ್ಕೆ ಮಾದರಿಯಾಗಿದ್ದೀರಿ. ರೋಟರಿಯ ವಿಸ್ಮಯ– The Magic of Rotary ಅಂತರಾಷ್ಟ್ರೀಯ ಕರೆಯು ನಮ್ಮ ಸಮಾಜ, ದೇಶ ಮತ್ತು ವಿಶ್ವದಲ್ಲಿ ವಿಸ್ಮಯ ಮೂಡಿಸುತ್ತಿರುವುದು ನಮಗೆಲ್ಲ ತಿಳಿದಿದೆ. ಮನುಕುಲದ ಸೇವೆಗೆ ವಿವಿಧ ನವನವೀನ ಮಾರ್ಗಗಳನ್ನು ಅನುಸರಿಸಿ ಸಮಾಜವನ್ನು ಸುಧಾರಿಸುವ ಕಾಯಕಗಳಿಗೆ ಆದ್ಯತೆಯನ್ನು ನೀಡೋಣ. 2024–25ರ ರೋಟರಿ ವರ್ಷದ ಅಭಿಯಾನದಲ್ಲಿ ನನಗೆ ಸಹಕಾರ ನೀಡಿದ ತಮಗೆ ವಂದಿಸುತ್ತೇನೆ. ಪ್ರಯಾಣಿಸಬೇಕಾದ ದಾರಿ ಕ್ರಮಿಸಬೇಕಾದ ಗುರಿ ನಿರಂತರವಾಗಿದೆ. ಜೀವನದ ಪಯಣದಲ್ಲಿ ರೋಟರಿ ಮುಖೇನ ಕಟ್ಟಿದ ಬಾಂಧವ್ಯಗಳು ಅಚಲವಾಗಿರಲಿ. ನಿಮ್ಮ ಕ್ಲಬ್ ಮುಖೇನ ನೀವು ಮಾಡುತ್ತಿರುವ ಎಲ್ಲಾ ಸೇವೆ ಮತ್ತು ಚಟುವಟಿಕೆಗಳಿಗೆ ಅಧ್ಯಕ್ಷರಿಗೆ, ಕಾರ್ಯದರ್ಶಿ ಮತ್ತು ಎಲ್ಲಾ ಸದಸ್ಯರಿಗೆ ಪ್ರೀತಿಯಿಂದ ಅಭಿನಂದಿಸುತ್ತೇನೆ. ನಾವು ಜೊತೆಯಾಗಿ ಸೇವಾ ನಿರತರಾಗಿ ಸ್ಫೂರ್ತಿಯ ಚಿಲುಮೆಗಳಾಗಿ ಉತ್ತಮ ಪರಿವರ್ತನೆಗಳನ್ನು ತರುವಲ್ಲಿ ಕಾರ್ಯೋನ್ಮುಖರಾಗೋಣ.

ರೋಟರಿ ಸೇವೆಯಲ್ಲಿ ತಮ್ಮವ,

**ರೊ. C.A. ದೇವ್ ಆನಂದ್,** ಜಿಲ್ಲಾ ಗವರ್ನರ್
ರೋಟರಿ ಅಂತಾರಾಷ್ಟ್ರೀಯ ಜಿಲ್ಲೆ 3182

---



## Assistant Governors Message

President Rtn.Judith Mendonca - "You have done wonderfully well so far in this Rotary year by participating in all the district projects.Your program road safety jatha followed by seminar on road safety was very appealing.Expecting more service projects from you throughout this Rotary year.

Best wishes to you, secretary and all the members of your club on the occasion of Governors official visit. With warm regards,

**- Rtn. Dr. B. Rajendra Shetty**, Assistant governor Zone 1

---

ನಾವು ಬೇರೆಯವರ ತಪ್ಪುಗಳಿಂದಲೂ ಕಲಿಯಬೇಕು. ಏಕೆಂದರೆ ಎಲ್ಲಾ ತಪ್ಪುಗಳನ್ನು ನಾವೇ ಮಾಡಿ ಅದರಿಂದಲೇ ಕಲಿಯುವಷ್ಟು ನಮ್ಮ ಜೀವನ ಸುದೀರ್ಘವಾಗಿರುವುದಿಲ್ಲ. **– ಎಪಿಜೆ ಅಬ್ದುಲ್ ಕಲಾಂ**

## ಕಾರ್ಯದರ್ಶಿಯವರ ವರದಿ

## 1. Vocational Service :

- ❖ ಜುಲೈ 1ರಂದು ವೈದ್ಯರ ದಿನದ ಆಚರಣೆಯ ಸಂದರ್ಭದಲ್ಲಿ ನಮ್ಮ ಅಸಿಸ್ಟೆಂಟ್ ಗವರ್ನರ್ ಆದ ಡಾ. ಬಿ. ರಾಜೇಂದ್ರ ಶೆಟ್ಟಿ ಮತ್ತು ನಮ್ಮ ಕ್ಲಬ್ಬಿನ 10 ವೈದ್ಯರುಗಳಾದ ರೊ. ಡಾ. ವಿಶ್ವೇಶ್ವರ, ರೊ. ಡಾ. ಉಮೇಶ್ ಪುತ್ರನ್, ರೊ. ಡಾ. ಆದರ್ಶ ಹೆಬ್ಬಾರ್, ರೊ. ಡಾ. ಪ್ರಿಯಾಂಕ ಜೋಗಿ, ರೊ. ಡಾ. ನಾಗೇಶ್, ರೊ. ಡಾ. ಪ್ರಸನ್ನ ಐತಾಳ್, ರೊ. ಡಾ. ರಾಜೇಶ್ ಬಾಯರಿ. ರೊ. ಡಾ. ಅನುಲೇಖಾ ಬಾಯರಿ, ರೊ. ಡಾ. ರಾಮ್‌ಮೋಹನ್, ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಇವರನ್ನು ಅವರವರ ಸೇವಾ ಸ್ಥಳಗಳಲ್ಲಿ ಅವರ ಸೇವೆಗಾಗಿ ಸನ್ಮಾನಿಸಿದೆವು.
- ❖ ನಮ್ಮ ಕ್ಲಬ್ಬಿನ ಲೆಕ್ಕ ಪರಿಶೋಧಕರಾದ ಶಾಂತಾರಾಮ್ ನಾಯಕ್‌ರವರನ್ನು ಅವರ ಕಛೇರಿಯಲ್ಲಿ ಸನ್ಮಾನಿಸಲಾಯಿತು.
- ❖ ಜುಲೈ 18ರಂದು ಉಡುಪಿಯ ಪ್ರಖ್ಯಾತ ಸ್ತ್ರೀರೋಗ ತಜ್ಞೆ ಡಾ| ರಾಜಲಕ್ಷ್ಮಿಯವರನ್ನು ವಾರದ ಸಭೆಯಲ್ಲಿ ಸನ್ಮಾನಿಸಲಾಯಿತು.
- ❖ ತಾ. 25–07–2024ರಂದು ಖ್ಯಾತ ಹವ್ಯಾಸಿ ಕಲಾವಿದರೂ, ಸಾಮಾಜಿಕ ಕಾರ್ಯಕರ್ತರೂ ರೋಟರಿ ಕ್ಲಬ್ ಬ್ರಹ್ಮಾವರದ ಮಾಜಿ ಅಧ್ಯಕ್ಷರೂ ಆದ ರೊ. ಆಲ್ವಿನ್ ಅಂದ್ರಾದೆಯವರನ್ನು ಕ್ಲಬ್ಬಿನ ಸಭೆಯಲ್ಲಿ ಗುರುತಿಸಿ ಸನ್ಮಾನಿಸಲಾಯಿತು.
- ❖ ತಾ. ಆಗಸ್ಟ್ 15ರಂದು – ಸಂಚಾರಿ ನಿಯಮಗಳ ಬಗ್ಗೆ ಅರಿವು ಮೂಡಿಸಲು ಆಗಮಿಸಿದ ನಿವೃತ್ತ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಶ್ರೀ ವಿಶ್ವನಾಥ ನಾಯಕ್‌ರವರನ್ನು ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ❖ ಆಗಸ್ಟ್ 29ರಂದು – ಯಕ್ಷಗಾನ ಕಲಾವಿದರಾದ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಎ. ರಾಜಶೇಖರ್ ಹೆಬ್ಬಾರ್ ಮತ್ತು ಶ್ರೀ ಪಿ. ಶ್ರೀನಿವಾಸ್ ಉಪಾಧ್ಯಾಯರನ್ನು ಕ್ಲಬ್ಬಿನ ಪರವಾಗಿ ಸನ್ಮಾನಿಸಲಾಯಿತು.
- ❖ ಸೆಪ್ಟೆಂಬರ್ 5ರಂದು ಶಿಕ್ಷಕರ ದಿನಾಚರಣೆ ಪ್ರಯುಕ್ತ ನಮ್ಮ ಕ್ಲಬ್ಬಿನ ರೊ. ಡಾ| ರಮೇಶ್ ಶೆಟ್ಟಿ, ರೊ. ನಂದಾ ನಾಯಕ್ ಮತ್ತು ಶ್ರೀ ಯೋಗಿಶ್ ಬಂಕೇಶ್ವರ್, Training Officer, ನಾಡಾ ಐಟಿಐ ಹಾಗೂ ಶ್ರೀ ಅರುಣ್ ಕುಮಾರ್ ಶೆಟ್ಟಿ, ಅಧ್ಯಾಪಕರು ತಲ್ಲೂರು ಸರಕಾರಿ ಹಿ.ಪ್ರಾ. ಶಾಲೆ ಇವರನ್ನು ಸನ್ಮಾನಿಸಲಾಯಿತು.
- ❖ ತಾ. ಸೆಪ್ಟೆಂಬರ್ 26ರಂದು – ಇಂಜಿನಿಯರ್ಸ್ ಡೇ ಪ್ರಯುಕ್ತ ನಮ್ಮ ಸದಸ್ಯರಾದ ರೊ. ಸತ್ಯನಾರಾಯಣ ಪುರಾಣಿಕರನ್ನು – ಕ್ಲಬ್ಬಿನ ವತಿಯಿಂದ ಸನ್ಮಾನಿಸಲಾಯಿತು.
- ❖ 10ನೇ ತಾರೀಖಿನಂದು ಸರಕಾರಿ ಆಸ್ಪತ್ರೆ ಹಟ್ಟಿಯಂಗಡಿ ವೈದ್ಯರಾದ ಡಾ. ವೈ. ರಂಗನಾಥ್‌ರವರನ್ನು ಗುರುತಿಸಿ ಸನ್ಮಾನಿಸಲಾಯಿತು. ಸಮುದಾಯ ಆರೋಗ್ಯಕ್ಕಾಗಿ ಅವರ ಸೇವೆಯನ್ನು ಕೊಂಡಾಡಿದೆವು.
- ❖ ದಿನಾಂಕ 12–10–2024ರಂದು ನಮ್ಮ ಸಂಸ್ಥೆಯ ರೊ. ಡಾ. ಉಮೇಶ್ ಪುತ್ರನ್‌ರವರನ್ನು ಅವರ ಆಸ್ಪತ್ರೆಯಲ್ಲಿ ಉಪಕರಣದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರನ್ನು ಅಭಿನಂದಿಸಿದೆವು. ಪಿಡಿಜಿ. ರೊ. ಅಭಿನಂದನ್ ಶೆಟ್ಟಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದರು.
- ❖ 17–10–2024ರಂದು ಶ್ರೀ ಜಯಶೀಲ್ ಕುಮಾರ್, ಉಪ ಪ್ರಾಂಶುಪಾಲರು, IMJISC ಇವರನ್ನು ಸನ್ಮಾನಿಸಲಾಯಿತು. ಯುವ ಜನತೆಗೆ ಮಾರ್ಗದರ್ಶಕರೂ ಅತ್ಯುತ್ತಮ ಉಪನ್ಯಾಸಕರೂ ಆಗಿರುವ ಇವರಿಗೆ ಕ್ಲಬ್‌ನ ವತಿಯಿಂದ ಸನ್ಮಾನಿಸಲಾಯಿತು.
- ❖ ಕನ್ನಡ ರಾಜ್ಯೋತ್ಸವ ಜಿಲ್ಲಾ ಪ್ರಶಸ್ತಿ ಪಡೆದ ಪಿಡಿಜಿ ರೊ. ಅಭಿನಂದನ್ ಶೆಟ್ಟಿಯವರಿಗೆ ಸನ್ಮಾನಿಸಲಾಯಿತು.
- ❖ ನವೆಂಬರ್ 14ರಂದು ರಾಷ್ಟ್ರ ಪ್ರಶಸ್ತಿ ವಿಜೇತ ರಂಗ ಕಲಾವಿದರಾದ ಶ್ರೀ ಬಿ. ಎಸ್. ರಾಮ್ ಶೆಟ್ಟಿ ಹಾರಾಡಿ ಇವರನ್ನು ಸನ್ಮಾನಿಸಲಾಯಿತು.
- ❖ ಕುಂದಾಪುರ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ವಿನೋದ್‌ಕ್ರಾಸ್ತಾರವರನ್ನು ಅಭಿನಂದಿಸಿ ಸನ್ಮಾನಿಸಿದೆವು. ಪಿಡಿಜಿ. ರೊ. ಸದಾನಂದ ಛಾತ್ರಾ ಉಪಸ್ಥಿತರಿದ್ದರು.
- ❖ ಉಡುಪಿ ವಿಶ್ವ ಸಂಸ್ಕೃತಿ ಪ್ರತಿಷ್ಠಾನ ಹಾಗೂ ಮಲಬಾರ್ ಗೋಲ್ಡ್ & ಡೈಮಂಡ್ ಉಡುಪಿ ಶಾಖೆ ವತಿಯಿಂದ ನೀಡಲ್ಪಡುವ "ಮಲಬಾರ್ ವಿಶ್ವ ಸಾಹಿತ್ಯ ಪುರಸ್ಕಾರ"ಕ್ಕೆ ರೊ. ಡಾ. ಉಮೇಶ್ ಪುತ್ರನ್‌ರವರು ಭಾಜನರಾದರು.

## 2. Community Service :

1. ರೋಟರಿಯಲ್ಲಿ ಜುಲೈ ತಿಂಗಳು ತಾಯಿ – ಮಗುವಿನ ಅಭ್ಯುದಯಕ್ಕಾಗಿ ಇರುವ ತಿಂಗಳು. ಈ ತಿಂಗಳಿನಲ್ಲಿ ತಲ್ಲೂರಿನ 5 ಅಂಗನವಾಡಿಗಳಿಗೆ – ತಲ್ಲೂರು, ಕೋಟೆಬಾಗಿಲು, ಪಿಂಗಾಣಿಗುಡ್ಡೆ, ರಾಜಾಡಿ ಮತ್ತು ಮಾರನಮನೆ ಈ ಶಾಲೆಗಳು 3 ರಿಂದ 6 ವರ್ಷದ 98 ಮಕ್ಕಳಿಗೆ ಪ್ರಾಥಮಿಕ ಕೇಂದ್ರದ ವೈದ್ಯರು, ಆಶಾ ಕಾರ್ಯಕರ್ತೆಯರು ಮತ್ತು ಅಂಗನವಾಡಿ ಶಿಕ್ಷಕಿಯರೊಂದಿಗೆ ಪ್ರೋಟೀನ್ ಪೌಡರ್ ವಿತರಣಾ ಕಾರ್ಯಕ್ರಮವನ್ನು ನಡೆಸಿದೆವು. ಇದರ ಒಟ್ಟು ಮೌಲ್ಯ ರೂ. 20,000/–
2. ತಾ. 28–07–24ರಂದು ತಲ್ಲೂರಿನ ನಾರಾಯಣ ವಿಶೇಷ ಶಾಲೆಯ ವಠಾರದಲ್ಲಿ ನಮ್ಮ **RCC** ಕ್ಲಬ್ಬಿನೊಂದಿಗೆ ವನಮಹೋತ್ಸವ ನಡೆಸಿ, ಸದಸ್ಯರಿಗೆ ಸಸಿಗಳನ್ನು ವಿತರಿಸಿದೆವು.
3. ತಾ. 28–07–24ರಂದು ತಲ್ಲೂರಿನ ನಾರಾಯಣ ವಿಶೇಷ ಶಾಲೆಗೆ ರೂ. 10,000/– ದೇಣಿಗೆಯನ್ನು ಕ್ಲಬ್ಬಿನ ವತಿಯಿಂದ ನೀಡಿರುತ್ತೇವೆ.
4. ತಾ. 31–07–24ರಂದು ಕುಂದಾಪುರದ ಸೈಂಟ್ ಮೇರೀಸ್ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಕುಂದಾಪುರ ವಲಯ ಮಟ್ಟದ ಚೆಸ್ ಸ್ಪರ್ಧೆಯ ಬಹುಮಾನದ ವೆಚ್ಚವಾಗಿ ರೂ. 8,000/– ದ ದೇಣಿಗೆಯನ್ನು ನೀಡಿರುತ್ತೇವೆ.
5. ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಕಾಲೇಜಿನ ಮೂವರು ಬಡ ವಿದ್ಯಾರ್ಥಿಗಳ ಪದವಿ ವಿದ್ಯಾಭ್ಯಾಸಕ್ಕಾಗಿ ದಾನಿಗಳು ಕೊಡಮಾಡಿದ ರೂ. 60,000/– ವನ್ನು ಹಸ್ತಾಂತರಿಸಿ, ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಹಾರೈಸಿದ್ದೇವೆ.
6. ತಾ. 29–07–2024 ಸರಕಾರಿ ಪ್ರೌಢಶಾಲೆ, ತಲ್ಲೂರು ಇಲ್ಲಿನ 240 ಮಕ್ಕಳಿಗೆ ಪ್ರಾಥಮಿಕ ಚಿಕಿತ್ಸೆಯ ಬಗ್ಗೆ ವಿಶೇಷವಾಗಿ ಹೃದಯಾಘಾತವಾದಾಗ ಅನುಸರಿಸಬೇಕಾದ CPR (Cardio Pulmanary Res) ನನ್ನು ಪ್ರಾತ್ಯಕ್ಷಿಕೆ ನೀಡುವುದರ ಮುಖೇನ ಅರಿವು ಮೂಡಿಸಿದ್ದೇವೆ. ಈ ಕಾರ್ಯಕ್ರಮವನ್ನು ರೊ. ಗುರುರಾಜ್ ಕೋತ್ವಾಲ್‌ರವರು ನಡೆಸಿಕೊಟ್ಟಿರುತ್ತಾರೆ.
7. ನಮ್ಮ ಕ್ಲಬ್ಬಿನ ಸಹಸಂಸ್ಥೆಯಾಗಿರುವ RCC Tallur ನ ಪದಪ್ರದಾನ ಕಾರ್ಯಕ್ರಮವನ್ನು ತಾ. 28–07–2024ರಂದು ನೆರವೇರಿಸಿ, ಅಧ್ಯಕ್ಷರಾಗಿ ಯೋಗೀಶ್ ಆಚಾರ್ಯ ಮತ್ತು ಕಾರ್ಯದರ್ಶಿಯಾಗಿ ಪ್ರಭಾಕರ ಆಚಾರ್ಯ ಇವರನ್ನು ನೇಮಿಸಲಾಯಿತು. ಈ ಕಾರ್ಯಕ್ರಮದಲ್ಲಿ ರೊ. ಸತ್ಯನಾರಾಯಣ ಪುರಾಣಿಕರವರು ಮುಖ್ಯಅತಿಥಿಯಾಗಿ ಭಾಗವಹಿಸಿದ್ದರು.
8. ತಾ. 29–07–2024ರಂದು ತಲ್ಲೂರಿನ ಪ್ರೌಢಶಾಲೆಯಲ್ಲಿ ಇಂಟರ್ಯಾಕ್ಟ್ ಕ್ಲಬ್ಬಿನ ಪದಗ್ರಹಣ ನೆರವೇರಿಸಿ, ಅಧ್ಯಕ್ಷ ಮತ್ತು ಕಾರ್ಯದರ್ಶಿಯನ್ನು ಆಯ್ಕೆ

ಮಾಡಲಾಯಿತು.

9. Dist. Projectಗಳಲ್ಲಿ ಒಂದಾದ ಪ್ರಾಥಮಿಕ ಶಿಕ್ಷಣ ಮತ್ತು ಸಾಕ್ಷರತೆಯ ಭಾಗವಾಗಿ ದಿನಾಂಕ 04–07–2024ರಂದು ನಮ್ಮ ಕ್ಲಬ್ಬಿನ ವತಿಯಿಂದ ನಮ್ಮ ಸದಸ್ಯರಾದ ರೊ. ಡಾ. ವಿಶ್ವೇಶ್ವರ್‌ರವರು ಕೊಡಮಾಡಿದ ರೂ. 5,000/–ವನ್ನು ಪಿಯುಸಿ ನೀಟ್‌ನಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನೀಡಲಾಯಿತು.
10. 04–07–2024ರಂದು ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನಮ್ಮ ಸದಸ್ಯರಾದ ರೊ. ಮನೋಹರ ಭಟ್ ಕೊಡಮಾಡಿದ ರೂ. 5,000/–ವನ್ನು ನೀಡಲಾಯಿತು.
11. ಸ. ಹಿ. ಪ್ರಾ. ಶಾಲೆ, ವಂಡ್ಸೆ ಇದರ ಅತಿಥಿ ಶಿಕ್ಷಕರಿಗೆ ಅವರ ಒಂದು ತಿಂಗಳ ಸಂಬಳ ರೂ. 48,000/–ವನ್ನು ನಮ್ಮ ಸದಸ್ಯರಾದ ರೊ. ಶ್ರೀಧರ್ ಶೆಟ್ಟಿಯವರು ದೇಣಿಗೆಯಾಗಿ ಕ್ಲಬ್ಬಿನ ಮುಖಾಂತರ ಚೆಕ್ ಮೂಲಕ ಹಸ್ತಾಂತರಿಸಿದರು.
12. ದಿನಾಂಕ 08–08–2024ರಂದು ಭಂಡಾರ್‌ಕಾರ್ಸ್ ಕಾಲೇಜಿನ ದ್ವಿತೀಯ ಬಿ. ಕಾಂ. ವಿದ್ಯಾರ್ಥಿನಿ ಸಹನಾರವರಿಗೆ ಕ್ಲಬ್ಬಿನ ಸದಸ್ಯರಿಂದ ರೂ. 22,800/–ನ್ನು ಸಂಗ್ರಹಿಸಿ, ಅವಳ ಪದವಿ ಶಿಕ್ಷಣಕ್ಕಾಗಿ ನೀಡಲಾಯಿತು.
13. Dist. - CRS Committee Chairman ರೊ. ಶ್ರೀಹರಿ ಚಾತ್ರಾರವರ ವಿನಂತಿಯ ಮೇರೆಗೆ ಹಳ್ಳಿಹೊಳೆ ಶೆಟ್ಟಿಪಾಲು ಸರಕಾರಿ ಕಿರಿಯ ಪ್ರಾಥಮಿಕ ಶಾಲೆಗೆ ರೂ. 5000/– ಚೆಕ್ಕನ್ನು ನೀಡಲಾಯಿತು.
14. ದಿನಾಂಕ 07–08–2024ರಂದು ಕುಂದಾಪುರ Oakwood ಶಾಲೆಯಲ್ಲಿ ಇಂಟರ್‍ಯಾಕ್ಟ್ ಕ್ಲಬ್‌ನ ಪದಪ್ರದಾನ ಸಮಾರಂಭವನ್ನು ನಡೆಸಲಾಯಿತು.
15. ಅದೇ ದಿನ Oakwood ಶಾಲೆಯಲ್ಲಿ "ವನಮಹೋತ್ಸವ" ಅಂಗವಾಗಿ Dist. Project ನ ಒಂದು ಭಾಗವಾದ Green & Water ಅಡಿಯಲ್ಲಿ ಸುಮಾರು 200 ಮಕ್ಕಳಿಗೆ ಗಿಡಗಳ ವಿತರಣೆ ಮಾಡಲಾಯಿತು.
16. Oakwood ಶಾಲೆಯ ಸುಮಾರು 150 ಮಕ್ಕಳಿಗೆ ಯಾರಿಗಾದರೂ ಹೃದಯಘಾತವಾದಾಗ ನೀಡಬೇಕಾದ ಪ್ರಥಮ ಚಿಕಿತ್ಸೆ CPR (Cardiopulmonary Resuscitation) ಯ ಪ್ರಾತ್ಯಕ್ಷಿತೆ ಮತ್ತು ಮಾಹಿತಿಯನ್ನು ರೊ. ಗುರುರಾಜ್ ಕೋತ್ವಾಲ್ ನೀಡಿದರು.
17. ಆಗಸ್ಟ್ 15ರಂದು – Dist. Project ಗಳಲ್ಲಿ ಒಂದಾದ Sanchara Safety (Awareness of Road Safety) ಇದರ ಅಡಿಯಲ್ಲಿ ನಮ್ಮ ಕ್ಲಬ್ ಮತ್ತು ಸರಕಾರಿ ಜೂನಿಯರ್ ಕಾಲೇಜಿನ ಮಕ್ಕಳಿಂದ "ರಸ್ತೆ ಸುರಕ್ಷತಾ ಜಾಗೃತಿ ಜಾಥಾ"ವನ್ನು ಏರ್ಪಡಿಸಿದ್ದೇವೆ. ನಮ್ಮ ಕ್ಲಬ್ಬಿನ ಸದಸ್ಯರು ಹಾಗೂ ಕಾಲೇಜಿನ 380 ಮಕ್ಕಳು – ಈ ಜಾಥಾದಲ್ಲಿ ಪಾಲ್ಗೊಂಡರು.
    ನಮ್ಮ A. G. ಯವರು ಇದರಲ್ಲಿ ಮುಖ್ಯ ಅತಿಥಿಯಾಗಿ – ಮತ್ತು PDG ರೊ. ಅಭಿನಂದನ್ ಶೆಟ್ಟಿಯವರು ಉದ್ಘಾಟಕರಾಗಿ, ರೋಟರಿ ಲಕ್ಷ್ಮೀ ನರಸಿಂಹ ಕಲಾ ಮಂದಿರದಲ್ಲಿ–ರಸ್ತೆ ಸುರಕ್ಷತೆ ಬಗ್ಗೆ ಜಾಗೃತಿ ಶಿಬಿರವನ್ನು ನೆರವೇರಿಸಿದೆವು. ನಿವೃತ್ತ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಾದ ಶ್ರೀ ವಿಶ್ವನಾಥ್ ನಾಯಕ್‌ರವರಿಂದ ವಿದ್ಯಾರ್ಥಿಗಳಿಗೆ ರಸ್ತೆ ಸುರಕ್ಷತೆಯ ಬಗ್ಗೆ ಮಾಹಿತಿಯನ್ನು ನೀಡಲಾಯಿತು.
18. ಆಗಸ್ಟ್ 3 ರಂದು ನಮ್ಮ ಕ್ಲಬ್ಬಿನ ಸದಸ್ಯರಾದ ರೊ. ಮನೋಹರ್ ಭಟ್‌ರವರು ಪ್ರತಿ ವರ್ಷದಂತೆ ಈ ವರ್ಷ ಕೂಡ ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಕೋಣಿಯಲ್ಲಿರುವ ಮಾನಸ ಜ್ಯೋತಿ ವಿಕಲಚೇತನ ಮಕ್ಕಳ ಶಾಲೆಗೆ ರೂ 20,000/– ದೇಣಿಗೆಯನ್ನು ಕ್ಲಬ್ಬಿನ ಮುಖೇನ ನೀಡಿದರು.
19. ಆಗಸ್ಟ್ 15ರಂದು ನಮ್ಮ ಸಂಸ್ಥೆಯ ರೊ. ಸತ್ಯನಾರಾಯಣ ಪುರಾಣಿಕ್ ಮತ್ತು ರೊ. ಸುರೇಖಾ ಪುರಾಣಿಕರ ಕುಟುಂಬದ ಸವಿ_ತಾ ಫೌಂಡೇಶನ್ ಮುಖಾಂತರ ಮಾಜಿ ಸದಸ್ಯರಾದ ದಿ. ಕೆ. ಪಿ. ಭಟ್ಟರ ಸ್ಮರಣಾರ್ಥ – ಬೆಲ್ಲಾಳದ ರಶ್ಮಿತಾ ಪೂಜಾರಿಯವರಿಗೆ ಅವರ ಸ್ವಾವಲಂಬನೆಗಾಗಿ ಹೊಲಿಗೆ ಮೆಶಿನನ್ನು ನೀಡಲಾಯಿತು.
20. ದಿನಾಂಕ : 26–08–2024 – ನಮ್ಮ ಕ್ಲಬ್ಬಿನ ವತಿಯಿಂದ ತಲ್ಲೂರಿನ 4 ಅಂಗನವಾಡಿಗಳ ಸುಮಾರು 92 ಮಕ್ಕಳಿಗೆ ಜುಲೈ ತಿಂಗಳಲ್ಲಿ ಪ್ರೋಟಿನ್ ಪೌಡರ್ ವಿತರಣೆ ಮಾಡಲಾಗಿತ್ತು ಅದು ಮಕ್ಕಳ ಬೆಳವಣಿಗೆಯಲ್ಲಿ (weight gain) ಗೆ ಸಹಕಾರಿಯಾಗಿರುವುದು ಅಂಗನವಾಡಿಯ ಎಲ್ಲಾ ಟೀಚರ್‌ಗಳ ಅಭಿಪ್ರಾಯವನ್ನು ಕೇಳಿ ಉಪ್ಪಿನಕುದ್ರು ಗ್ರಾಮದ 3 ಅಂಗನವಾಡಿ ಶಿಕ್ಷಕಿಯರು ತಮ್ಮ ಮಕ್ಕಳಿಗೂ ನೀಡುವಂತೆ ಬೇಡಿಕೆ ಇಟ್ಟಿದ್ದರು. ಆದರಂತೆ ಉಪ್ಪಿನಕುದ್ರು ಗ್ರಾಮದ ವಾಸು ದೇವಸ್ಥಾನ ಅಂಗನವಾಡಿ, ಆಲ್ಕುದ್ರು ಅಂಗನವಾಡಿ ಮತ್ತು ವರಹಾಗಣಪತಿ ದೇವಸ್ಥಾನದ ಅಂಗನವಾಡಿಗಳ 85 ಮಕ್ಕಳಿಗೆ ಪ್ರೋಟಿನ್ ಪೌಡರ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಗ್ರಾ. ಪ. ಅಧ್ಯಕ್ಷರು–ಸದಸ್ಯರೂ ಹಾಜರಿದ್ದರು. ಇದರ ಒಟ್ಟು ಮೊತ್ತ ರೂ. 20,000/–
21. ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಮತ್ತು ಇನ್ನರ್‌ವೀಲ್ ಕುಂದಾಪುರ ಹಾಗೂ ಮಧ್ವರಾಜ್ ಎನಿಮಲ್ ಕೇರ್ ಮಲ್ಪೆ – ಜಂಟಿ ಆಶ್ರಯದಲ್ಲಿ ಸೆಪ್ಟಂಬರ್ 2 ರಿಂದ 5 ರವರೆಗೆ – ಪಶು ಆಸ್ಪತ್ರೆ ಕುಂದಾಪುರದಲ್ಲಿ ಮನೆಯಲ್ಲಿ ಸಾಕಿದ ದೇಸಿ ನಾಯಿಗಳಿಗೆ ಉಚಿತ – ಸಂತಾನಹರಣ ಚಿಕಿತ್ಸೆ ನಡೆಯಿತು. 90 ನಾಯಿಗಳಿಗೆ ಈ ಚಿಕಿತ್ಸೆ ನಡೆಸಿದುದರಿಂದ ಸಾರ್ವಜನಿಕರು ಉತ್ತಮ ಸ್ಪಂದನೆ ಮತ್ತು ಪ್ರಶಂಸೆಗಳನ್ನು ನೀಡಿದರು.
22. ನಮ್ಮ ಕ್ಲಬ್ಬಿನ ಮಹತ್ತರ ಕಾರ್ಯಕ್ರಮ – ಸಪ್ಟೆಂಬರ್ 14 ರಂದು ನಡೆಯಿತು.
    "ಉಚಿತ ಕ್ಯಾನ್ಸರ್ ತಪಾಸಣಾ" ಕಾರ್ಯಕ್ರಮ ತಲ್ಲೂರಿನ ಚರ್ಚ್ ಹಾಲ್‌ನಲ್ಲಿ ನಡೆಯಿತು.
    ಮಂಗಳೂರಿನ ಪ್ರಸಿದ್ಧ ಜುಲೇಖಾ ಯೆನೆಪೊಯಾ ಇನ್ಸಿಸ್ಟಿಟ್ಯೂಟ್ ಆಫ್ Oncology ಆಸ್ಪತ್ರೆಯ ನುರಿತ ವೈದ್ಯರ ತಂಡದಿಂದ ತಪಾಸಣೆ ಮಾಡಲಾಯಿತು. ಶಿಬಿರದಲ್ಲಿ 142 ಜನ ಪಾಲ್ಗೊಂಡರು. 57 ಮಹಿಳೆಯರಿಗೆ Mammography ಮತ್ತು Pap Smear ಪರೀಕ್ಷೆಗಳನ್ನು ನಡೆಸಲಾಯಿತು.
    ಈ ಕಾರ್ಯಕ್ರಮಕ್ಕಾಗಿ ರೇಡಿಯೋ ಕುಂದಾಪುರ 89.6 FM ನಲ್ಲಿಯೂ ಪ್ರಚಾರವನ್ನು ನೀಡಲಾಯಿತು.
23. ದಿನಾಂಕ 15–09–2024ರಂದು International Democracy Day ದಿನದಂದು ನಾವು ಭಾಗವಹಿಸಿ, ಸಂವಿಧಾನದ ಪ್ರತಿಜ್ಞಾವಿಧಿಯ ದಿನದಂದು N.H.66 ರಲ್ಲಿ ಮಾನವ ಸರಪಳಿ ಕಾರ್ಯಕ್ರಮದಲ್ಲಿ ಭಾಗವಹಿಸಿದೆವು.
24. ದಿನಾಂಕ 16–09–2024ರಂದು ಜಾಗತಿಕ ಮಟ್ಟದ ವಿಶೇಷ ಚೇತನರ ಎಡಗೈ, ಬಲಗೈ Arm Wrestling ನಲ್ಲಿ 2 ಚಿನ್ನದ ಪದಕ ಪಡೆದ ಸಾಸ್ತಾನದ ಶ್ರೀ ಸುರೇಶ್ ಪೂಜಾರಿಯವರಿಗೆ ಮುಂದಿನ ಅಂತರಾಷ್ಟ್ರೀಯ ಸ್ಪರ್ಧೆಗಾಗಿ ಗ್ರೀಸ್ ದೇಶಕ್ಕೆ ಹೋಗಲು ಅವರ ವಿನಂತಿಯ ಮೇರೆಗೆ ರೂ. 10,000/–ವನ್ನು ಕ್ಲಬ್ಬಿನ ವತಿಯಿಂದ ನೀಡಲಾಯಿತು.
25. ತಾರೀಖು 22 ರಂದು ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಂಗಣದಲ್ಲಿ ನಮ್ಮ ಕ್ಲಬ್ ಮತ್ತು ಪತಂಜಲಿ ಯೋಗ ಸಮಿತಿ ಕುಂದಾಪುರದವರೊಂದಿಗೆ "ವಿಶ್ವಯೋಗ ಸಮ್ಮೇಳನ" – 2024ರ ಪೂರ್ವಭಾವಿ ಯೋಗ ಸಮ್ಮಿಲನ ಕಾರ್ಯಕ್ರಮ ನಡೆಸಲಾಯಿತು. ರೋಟರಿ ಸದಸ್ಯರೊಡಗೂಡಿ ಸುಮಾರು 75 ಯೋಗ ಪಟುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದರು.

Dist. Governor - Rtn. ದೇವಾನಂದ್‌ರವರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದರು.

ಸೆಪ್ಟಂಬರ್ 23ರಂದು ನಮ್ಮ ಕ್ಲಬ್ ಮತ್ತು ದಾನಿಗಳ ವತಿಯಿಂದ ಈ ವರ್ಷದ ಗಾಳಿ–ಮಳೆಗೆ ಸಂಪೂರ್ಣ ಜಖಂಗೊಂಡಿದ್ದ ತಲ್ಲೂರಿನ ಶ್ರೀಮತಿ ಮೂಕಾಂಬಿಕ ದೇವಾಡಿಗರವರಿಗೆ ಮನೆ ನಿರ್ಮಿಸುವ ನಿಟ್ಟಿನಲ್ಲಿ "ಭೂಮಿ ಪೂಜೆ" ಮಾಡಲಾಯಿತು.

ಡಿಸೆಂಬರ್ 12ರ ಗವರ್ನರ್ ಭೇಟಿಯೊಳಗೆ ಮನೆ ನಿರ್ಮಿಸಿಕೊಡುವ ಗುರಿಯನ್ನು ಇರಿಸಿಕೊಂಡಿದ್ದೇವೆ.

26.02–10–2024 ರಂದು ಗಾಂಧಿ ಜಯಂತಿ ಪ್ರಯುಕ್ತ ತಲ್ಲೂರಿನ **(RCC)** ರೋಟರಿ ಗ್ರಾಮೀಣ ದಳದೊಂದಿಗೆ **Dist. Project** ನ ಭಾಗವಾದ "ಸ್ವಚ್ಛತಾ"ದಲ್ಲಿ ತಲ್ಲೂರಿನ ಪೇಟೆ ಮತ್ತು ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಸ್ವಚ್ಛತೆಯನ್ನು ಮಾಡಲಾಯಿತು. ಸುಮರು 8 ಚೀಲದಷ್ಟು ಕಸವನ್ನು ಸಂಗ್ರಹಿಸಿ **SLRM** ಘಟಕಕ್ಕೆ ನೀಡಲಾಯಿತು.

27.ತಾ. 02–10–24ರಂದು ತಲ್ಲೂರಿನ ಜಯರಾಣಿ ವೃದ್ಧಾಶ್ರಮಕ್ಕೆ ಭೇಟಿ ನೀಡಿ ಅಲ್ಲಿನ ಹಿರಿಯರೊಂದಿಗೆ ಸಮಯ ಕಳೆದು, ಅವರಿಗೆ ದಿನಸಿ ಸಾಮಗ್ರಿಗಳನ್ನು ವಿತರಿಸಲಾಯಿತು.

28.ತಾ. 15–10–24ರಂದು ತಲ್ಲೂರು ಉಪ್ಪಿನಕುದ್ರು ಭಾಗದ ಆಶಾ ಕಾರ್ಯಕರ್ತೆಯರ ಮುಖೇನ ಮಕ್ಕಳ ತಾಯಂದಿರ ಕೋರಿಕೆಯ ಮೇರೆಗೆ 2ನೇ ಬಾರಿಗೆ ಪ್ರೋಟಿನ್ ಪೌಡರ್ ವಿತರಿಸಲಾಯಿತು.

29.ದಿನಾಂಕ 20–11–2024ರಂದು ಕುಂದಾಪುರದ **Oakwood** ಶಾಲೆಯ ಸುಮಾರು 170 ಮಕ್ಕಳಿಗೆ ಕಾನೂನು ಮಾಹಿತಿ ಶಿಬಿರ – **Pocso** ಕಾಯಿದೆ ಬಗ್ಗೆ ಶಿಬಿರ ನಡೆಸಲಾಯಿತು. ವೈ. ಶರತ್ ಶೆಟ್ಟಿ ಸಂಪನ್ಮೂಲ ವ್ಯಕ್ತಿಯಾಗಿದ್ದರು.

30.ಟ್ರಾಫಿಕ್ ನಿಯಮಗಳ ಬಗ್ಗೆ ಕುಂದಾಪುರದ **Oakwood** ಶಾಲೆಯಲ್ಲಿ ಮಕ್ಕಳಿಗೆ ಶಿಬಿರ ಏರ್ಪಡಿಸಲಾಯಿತು. ಇನ್ಸ್‌ಪೆಕ್ಟರ್ ಸುರೇಶ್ ಮಾಹಿತಿ ನೀಡಿದರು.

31. "ತಂಬಾಕು ಸೇವನೆಯ ಅಪಾಯ ಮತ್ತು ಪರಿಣಾಮಗಳು" – ಈ ವಿಚಾರವಾಗಿ ತಾಲೂಕು ಆರೋಗ್ಯ ಇಲಾಖೆಯ ಅಧೀಕ್ಷಕಿ ಶ್ರೀಮತಿ ಮಂಜುಳಾ ಶೆಟ್ಟಿಯವರು **Oakwood** ಶಾಲೆಯ ಮಕ್ಕಳಿಗೆ ಮಾಹಿತಿಯನ್ನು ನೀಡಿದರು.

## 3. Club Service :

- ಜುಲೈ ತಿಂಗಳ ಮೊದಲ ಗುರುವಾರ ತಾ. 4 ರಂದು ನಮ್ಮ ಕ್ಲಬ್ಬಿನ ಪದಪ್ರದಾನ
- ಜುಲೈ 11 ರಂದು ಪದಪ್ರದಾನ ಸಮಾರಂಭದ ಮೆಲುಕುಗಳು (Impression on Installation)
- ಜುಲೈ 18ರಂದು July Joint Meeting with our Innerwheel members
- ಈ ತಿಂಗಳು ತಾಯಿ ಮತ್ತು ಮಗುವಿನ ಆರೈಕೆಯ ತಿಂಗಳಾಗಿರುವುದರಿಂದ ತಾಯಿ ಮತ್ತು ಮಗುವಿನ ಆರೋಗ್ಯ ಹಾಗೂ ಮಹಿಳೆಯರು ತಮ್ಮ ಆರೋಗ್ಯದ ಕಾಳಜಿ ಹೇಗೆ ವಹಿಸಬೇಕು ಎನ್ನುವುದರ ಕುರಿತು ಉಡುಪಿಯ ಪ್ರಖ್ಯಾತ ಸ್ತ್ರೀರೋಗ ತಜ್ಞೆ ಡಾ. ರಾಜಲಕ್ಷ್ಮಿ ಇವರು ಉಪನ್ಯಾಸ ನೀಡಿದರು.
- ಜುಲೈ 25ರ ಸಭೆಯು ನಮ್ಮ ಕುಟುಂಬ ಸಮ್ಮಿಲನವಾಗಿದ್ದು, ನಮ್ಮ ಕ್ಲಬ್ಬಿನ ರೋಟರಿ ಕುಟುಂಬದ ಹೆಚ್ಚಿನ ಸದಸ್ಯರು ಹಾಜರಿದ್ದು. "The expressions" ತಂಡದಿಂದ ಅತ್ಯುತ್ತಮವಾದ ನಗೆ ಪ್ರಹಸನಗಳ ಪ್ರದರ್ಶನವಾಯಿತು. ಭೋಜನದ ಜೊತೆ ಎಲ್ಲಾ ಸದಸ್ಯರು ಸಂತೋಷದಿಂದ ಪಾಲ್ಗೊಂಡರು.
- ಈ ವರ್ಷದ ಅರ್ಧ ವಾರ್ಷಿಕ RI Dues ಜುಲೈ 30ಕ್ಕೆ 2,08,931.00 ಪಾವತಿಸಿದ್ದೇವೆ. ಮತ್ತು Dist. Dues - Rs. 27,000/-, ಹಾಗೂ Rotary News Rs. 25,920/- ಪಾವತಿಸಿರುತ್ತೇವೆ.
- ನಿಧನರಾದ ಪಿಡಿಜಿ ರೊ. ರಾಮಚಂದ್ರ ಮೂರ್ತಿಯವರಿಗೆ ಶ್ರದ್ಧಾಂಜಲಿ ಅರ್ಪಿಸಿದೆವು.
- ಪ್ರತಿ ವಾರ ನಮ್ಮ ಕ್ಲಬ್ಬಿನ ಮುಖವಾಣಿ 'ಜಾಸ್ಮಿನ್' ಮುದ್ರಿಸಿ ಎಲ್ಲಾ ಸದಸ್ಯರಿಗೆ ನೀಡಿದ್ದೇವೆ. (24 ವಾರ + 2 ವಿಶೇಷ ಸಂಚಿಕೆ)
- ಈ ಸಾಲಿನಲ್ಲಿ 5 ಹೊಸ ಸದಸ್ಯರನ್ನು ಸೇರಿಸಲಾಯಿತು.
- ತಾ. ಆಗಸ್ಟ್ 1ನೇ ತಾರೀಖಿನ ನಮ್ಮ ಸಭೆ Club Assembly ಆಗಿತ್ತು.
- ತಾ. ಆಗಸ್ಟ್ 8ನೇ ತಾರೀಖಿನ ಸಭೆ "ಸದಸ್ಯತ್ವ ಅಭಿವೃದ್ಧಿ ಪ್ರಾಮುಖ್ಯತೆ" – ಮುಖ್ಯ ಅತಿಥಿ Rtn. ಅಶೋಕ ಶೆಟ್ಟಿ Dist. Chairman, Rotary Membership Dev. Committee, Zonal Co-Ordinator Rtn. ಶ್ರೀನಾಥ್ ರಾವ್ ಹಾಜರಿದ್ದರು.
- ತಾ. ಆಗಸ್ಟ್ 15ರಂದು ಗುರುವಾರ – ಸ್ವಾತಂತ್ರ್ಯ ದಿನಾಚರಣೆ, ರಸ್ತೆ ಸುರಕ್ಷತಾ ಜಾಗೃತಿ ಜಾಥಾ ಮತ್ತು ಶಿಬಿರ
- ತಾ. ಆಗಸ್ಟ್ 22ರಂದು ವಾರದ ಸಭೆಗೆ – ಮುಖ್ಯ ಅತಿಥಿಯಾಗಿ – ಶ್ರೀ ಗಿರೀಶ್ ಐತಾಳ್‌ರವರು ಆಗಮಿಸಿ, ವಿಷಮಯ ಆಹಾರದಿಂದ–ವಿಷಮುಕ್ತ ಆಹಾರ ಪದ್ಧತಿಯ ಬಗ್ಗೆ ಮಾತನಾಡಿದರು.
- ತಾ. ಆಗಸ್ಟ್ 29ರಂದು ರೋಟರಿ ಕುಟುಂಬ ಸಮ್ಮಿಲನವಾಗಿದ್ದು, ಯಕ್ಷಗಾನ ಕಲಾಕೇಂದ್ರ ಹಂಗಾರಕಟ್ಟೆ ಐರೋಡಿಯವರಿಂದ "ಅರ್ಜುನ ಸನ್ಯಾಸಿ"ಯೆಂಬ ಯಕ್ಷಗಾನ ಕಾರ್ಯಕ್ರಮವನ್ನು ಪ್ರದರ್ಶಿಸಲಾಯಿತು.
- ತಾ. ಸೆಪ್ಟೆಂಬರ್ 5ರಂದು ಗುರುವಾರದ ವಾರದ ಸಭೆಗೆ ಮುಖ್ಯ ಅತಿಥಿಯಾಗಿ – ಶ್ರೀ ಯೋಗಿಶ್ ಬಂಕೇಶ್ವರ್, JTO - Fr. Robert Z.M. D'Souza ಮೆಮೋರಿಯಲ್ ಐಟಿಐ, ನಾಡಾ ಇವರು ಆಗಮಿಸಿ, ಪ್ರಸ್ತುತ ಕಾಲಘಟ್ಟದಲ್ಲಿ ತಾಂತ್ರಿಕ ಶಿಕ್ಷಣದ ಅಗತ್ಯತೆ ಕುರಿತು ಮಾತನಾಡಿದರು.
- ತಾ. 12 ಸೆಪ್ಟೆಂಬರ್ Club Assembly ಯಾಗಿತ್ತು.
- ತಾ. 19 ಸೆಪ್ಟೆಂಬರ್ – ಗುರುವಾರದ ಸಭೆಗೆ ಮುಖ್ಯ ಅತಿಥಿಯಾಗಿ ಡಾ। ಪ್ರಕಾಶ್ ತೋಳಾರ್, ಮಾತಾ ಆಸ್ಪತ್ರೆ ಕುಂದಾಪುರ ಇವರು "ಮಾನಸಿಕ ಆರೋಗ್ಯದ" ಬಗ್ಗೆ ಮಾತಾನಾಡಿದರು.
- ತಾ. ಸೆಪ್ಟೆಂಬರ್ 26ರ ವಾರದ ಸಭೆ – ಕುಟುಂಬ ಸಮ್ಮಿಲನವಾಗಿದ್ದು ನಮ್ಮ ಸದಸ್ಯರಿಂದ ಪ್ರತಿಭಾ ಪ್ರದರ್ಶನ ಕಾರ್ಯಕ್ರಮವಿದ್ದು, ಸದಸ್ಯರು ಉತ್ಸಾಹದಿಂದ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು.
- October 3 : Club Assembly
- October 10 : "ಸಮುದಾಯ ಆರೋಗ್ಯ ಮತ್ತು ನಾವು" ಎನ್ನುವ ವಿಚಾರವಾಗಿ ಡಾ। ರಂಗನಾಥ್ ವೈ. ಪಿ. ಪ್ರಾಥಮಿಕ ಆರೋಗ್ಯ ಕೇಂದ್ರ ಹಟ್ಟಿಯಂಗಡಿ ಇವರು ಅತಿಥಿಯಾಗಿ ಬಂದು ಮಾತನಾಡಿದರು.
- October 17 : "ರತನ್ ಟಾಟಾ ಒಂದು ಯಶೋಗಾಥೆ" ಶ್ರೀ ಜಯಶೀಲ್ ಕುಮಾರ್ ಉಪಪ್ರಾಂಶುಪಾಲರು, IMJISC ಮೂಡ್ಲಕಟ್ಟೆ ಅತಿಥಿಯಾಗಿ

ಬಂದು ರತನ್ ಟಾಟಾ ಯಶೋಗಾಥೆಯನ್ನು ವಿವರಿಸಿದರು.

- October 24 : ವಾರದ ಸಭೆ "Meeting with dinner"
- October 31 : ದೀಪಾವಳಿ ಸಂಭ್ರಮಾಚರಣೆ – ಕ್ಲಬ್ಬಿನ ಸದಸ್ಯರೆಲ್ಲ ಸೇರಿ ದೀಪಗಳನ್ನು ಬೆಳಗಿಸಿ, ಸಿಹಿ ಹಂಚಿ ಸಭೆ ನಡೆಸಿ ದೀಪಾವಳಿ ಆಚರಿಸಿದೆವು.
- November 7 : ವಲಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆ "ಗಂಗಾತರಂಗ" ವಿಶ್ಲೇಷಣೆ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲರಿಗೂ ಔತಣಕೂಟ
- November 14 : ವಾರದ ಸಭೆಗೆ ಅತಿಥಿಯಾಗಿ ಶ್ರೀ ಬಿ. ಎಸ್. ರಾಮ್ ಶೆಟ್ಟಿ, ಹಾರಾಡಿಯವರು "ರಂಗಭೂಮಿ" – ಆಸಕ್ತಿ ಮತ್ತು ಅವಕಾಶಗಳು ಎನ್ನುವ ವಿಚಾರವಾಗಿ ಮಾತನಾಡಿದರು.
- November 24 : ಈ ಸಭೆಯು ಕುಟುಂಬ ಮಿಲನವಾಗಿದ್ದು, ಪಿಡಿಜಿ ರೊ. ಸದಾನಂದ ಚಾತ್ರರವರ ಮೂಲಮನೆ – ಹೊಸಂಗಡಿಯ ಚಾತ್ರಾಸ್ ಎಸ್ಟೇಟ್‌ನಲ್ಲಿ Outdoor Meeting ನಡೆಸಲಾಯಿತು.
- November 28 : ವಾರದ ಸಭೆಯು ಕ್ಲಬ್ ಅಸೆಂಬ್ಲಿಯಾಗಿದ್ದು, ಕ್ಲಬ್ಬಿಗೆ ಡಿಸ್ಟ್ರಿಕ್ಟ್ ಗವರ್ನರ್‌ರವರ ಅಧಿಕೃತ ಭೇಟಿಯ ಬಗ್ಗೆ ಪೂರ್ವ ತಯಾರಿ ಆಗಿತ್ತು.

## 4. New Generation Service (Youth Service) :

1. ಕುಂದಾಪುರದ ಡಾ. ಬಿ.ಬಿ. ಹೆಗ್ಡೆ ಕಾಲೇಜಿನ ಮೂವರು ಬಡ ವಿದ್ಯಾರ್ಥಿಗಳ ಪದವಿ ವಿದ್ಯಾಭ್ಯಾಸಕ್ಕಾಗಿ ದಾನಿಗಳು ಕೊಡಮಾಡಿದ ರೂ. 60,000/– ವನ್ನು ಹಸ್ತಾಂತರಿಸಿ, ವಿದ್ಯಾರ್ಥಿಗಳ ಅಭ್ಯುದಯಕ್ಕಾಗಿ ಹಾರೈಸಿದ್ದೇವೆ.
2. ತಾ. 29–07–2024 ಸರಕಾರಿ ಪ್ರೌಢಶಾಲೆ, ತಲ್ಲೂರು ಇಲ್ಲಿನ 240 ಮಕ್ಕಳಿಗೆ ಪ್ರಾಥಮಿಕ ಚಿಕಿತ್ಸೆಯ ಬಗ್ಗೆ ವಿಶೇಷವಾಗಿ ಹೃದಯಾಘಾತವಾದಾಗ ಅನುಸರಿಸಬೇಕಾದ CPR (Cardio Pulmanary Res) ನನ್ನು ಪ್ರಾತ್ಯಕ್ಷಿಕೆ ನೀಡುವುದರ ಮುಖೇನ ಅರಿವು ಮೂಡಿಸಿದ್ದೇವೆ. ಈ ಕಾರ್ಯಕ್ರಮವನ್ನು ರೊ. ಗುರುರಾಜ್ ಕೋತ್ವಾಲ್‌ರವರು ನಡೆಸಿಕೊಟ್ಟಿರುತ್ತಾರೆ.
3. ದಿನಾಂಕ 04–07–2024ರಂದು ನಮ್ಮ ಕ್ಲಬ್ಬಿನ ವತಿಯಿಂದ ನಮ್ಮ ಸದಸ್ಯರಾದ ರೊ. ಡಾ. ವಿಶ್ವೇಶ್ವರ್‌ರವರು ಕೊಡಮಾಡಿದ ರೂ. 5,000/–ವನ್ನು ಪಿಯುಸಿ ನೀಟ್‌ನಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನೀಡಲಾಯಿತು.
4. 04–07–2024ರಂದು ಹತ್ತನೇ ತರಗತಿಯಲ್ಲಿ ಉತ್ತಮ ಅಂಕಗಳಿಸಿದ ವಿದ್ಯಾರ್ಥಿನಿಗೆ ನಮ್ಮ ಸದಸ್ಯರಾದ ರೊ. ಮನೋಹರ ಭಟ್ ಕೊಡಮಾಡಿದ ರೂ. 5,000/–ವನ್ನು ನೀಡಲಾಯಿತು.
5. ದಿನಾಂಕ 08–08–2024ರಂದು ಭಂಡಾರ್‌ಕಾರ್ಸ್ ಕಾಲೇಜಿನ ದ್ವಿತೀಯ ಬಿ. ಕಾಂ. ವಿದ್ಯಾರ್ಥಿನಿ ಸಹನಾರವರಿಗೆ ಕ್ಲಬ್ಬಿನ ಸದಸ್ಯರಿಂದ ರೂ. 22,800/ –ನ್ನು ಸಂಗ್ರಹಿಸಿ, ಅವಳ ಪದವಿ ಶಿಕ್ಷಣಕ್ಕಾಗಿ ನೀಡಲಾಯಿತು.
6. ದಿನಾಂಕ 07–08–2024ರಂದು Oakwood ಶಾಲೆಯ ಸುಮಾರು 150 ಮಕ್ಕಳಿಗೆ ಯಾರಿಗಾದರೂ ಹೃದಯಘಾತವಾದಾಗ ನೀಡಬೇಕಾದ ಪ್ರಥಮ ಚಿಕಿತ್ಸೆ CPR (Cardiopulmonary Resuscitation) ಯ ಪ್ರಾತ್ಯಕ್ಷಿತೆ ಮತ್ತು ಮಾಹಿತಿಯನ್ನು ರೊ. ಗುರುರಾಜ್ ಕೋತ್ವಾಲ್ ನೀಡಿದರು.
7. ಆಗಸ್ಟ್ 15ರಂದು ಬೆಲ್ಲಾಳದ ರಶ್ಮಿತಾ ಪೂಜಾರಿಯವರಿಗೆ ಅವರ ಸ್ವಾವಲಂಬನೆಗಾಗಿ ಹೊಲಿಗೆ ಮೆಶಿನನ್ನು ನೀಡಲಾಯಿತು.
8. ದಿನಾಂಕ 16–09–2024ರಂದು ಜಾಗತಿಕ ಮಟ್ಟದ ವಿಶೇಷ ಚೇತನರ ಎಡಗೈ, ಬಲಗೈ Arm Wrestling ನಲ್ಲಿ 2 ಚಿನ್ನದ ಪದಕ ಪಡೆದ ಸಾಸ್ತಾನದ ಶ್ರೀ ಸುರೇಶ್ ಪೂಜಾರಿಯವರಿಗೆ ಮುಂದಿನ ಅಂತರಾಷ್ಟ್ರೀಯ ಸ್ಪರ್ಧೆಗಾಗಿ ಗ್ರೀಸ್ ದೇಶಕ್ಕೆ ಹೋಗಲು ಅವರ ವಿನಂತಿಯ ಮೇರೆಗೆ ರೂ. 10,000/–ವನ್ನು ಕ್ಲಬ್ಬಿನ ವತಿಯಿಂದ ನೀಡಲಾಯಿತು.
9. ದಿನಾಂಕ 20–11–2024ರಂದು ಕುಂದಾಪುರದ **Oakwood** ಶಾಲೆಯ ಸುಮಾರು 170 ಮಕ್ಕಳಿಗೆ ಕಾನೂನು ಮಾಹಿತಿ ಶಿಬಿರ – **Pocso** ಕಾಯಿದೆ ಬಗ್ಗೆ ಶಿಬಿರ ನಡೆಸಲಾಯಿತು. ವೈ. ಶರತ್ ಶೆಟ್ಟಿ ಸಂಪನ್ಮೂಲ ವ್ಯಕ್ತಿಯಾಗಿದ್ದರು.
10. ಟ್ರಾಫಿಕ್ ನಿಯಮಗಳ ಬಗ್ಗೆ ಕುಂದಾಪುರದ **Oakwood** ಶಾಲೆಯಲ್ಲಿ ಮಕ್ಕಳಿಗೆ ಶಿಬಿರ ಏರ್ಪಡಿಸಲಾಯಿತು. ಇನ್ಸ್‌ಪೆಕ್ಟರ್ ಸುರೇಶ್ ಮಾಹಿತಿ ನೀಡಿದರು.
11. "ತಂಬಾಕು ಸೇವನೆಯ ಅಪಾಯ ಮತ್ತು ಪರಿಣಾಮಗಳು" – ಈ ವಿಚಾರವಾಗಿ ತಾಲೂಕು ಆರೋಗ್ಯ ಇಲಾಖೆಯ ಅಧೀಕ್ಷಕಿ ಶ್ರೀಮತಿ ಮಂಜುಳಾ ಶೆಟ್ಟಿಯವರು **Oakwood** ಶಾಲೆಯ ಮಕ್ಕಳಿಗೆ ಮಾಹಿತಿಯನ್ನು ನೀಡಿದರು.

## 5. International Service :

Our Club President Rtn. Judith Mendonca met below International Rotarians at "ನಮ್ಮ ಭೂಮಿ", Hattiangadi.

1. Kjetil Utne: District Rotary Public Image Coordinator D2275, City Council Member of Trondheim, Norway. India is his second home, has visited India 15 times, including the Norway-India bikeathon. (Age 68)

2. Anna Lena Løbakk : Peace Fellowship Chair in Rotary district 2275. President elect Verdal Rotary Club 2025-2026. Dentist. (Age 48)

3. Agnar Løbakk: Member of the Project Committee of Verdal Rotary Club, engineer. (Age 54)"4. Anne Mette Gangsøy: Head Mistress and certified diversity leader. Member of Notodden Rotary klubb since 2022. Worked for Nordic Council of Ministers as the CEO for the Nordic Institute in Greenland. (Age 57)

### ಭಾಗವಹಿಸುವಿಕೆ

- ತಾ. 30–06–2024ರಂದು ನಡೆದ Governor Installation ಕಾರ್ಯಕ್ರಮಕ್ಕೆ ನಮ್ಮ ಕ್ಲಬ್ಬಿನ 12 ಸದಸ್ಯರು ಭಾಗವಹಿಸಿದ್ದರು. Zoneನ 7 ಕ್ಲಬ್ಬಿನ ಪದಗ್ರಹಣ ಕಾರ್ಯಕ್ರಮದಲ್ಲಿ ನಮ್ಮ ಕ್ಲಬ್ಬಿನ ಹೆಚ್ಚಿನ ಸದಸ್ಯರು ಪಾಲ್ಗೊಂಡಿದ್ದರು.
- ಚಿಗುರು Dist. interact Assembly ಯಲ್ಲಿ ನಮ್ಮ Interact ಕ್ಲಬ್‌ಗಳ ಮಕ್ಕಳೊಂದಿಗೆ ನಾವು ಕೂಡ ಭಾಗವಹಿಸಿದೆವು.

